ಉದ್ದವೆಷ್ಟು?

ಆ) ಈ ರಸ್ತೆಯ ಅಭಿವೃದ್ಧಿಗಾಗಿ ಯೋಜನೆ ಹಾಗೂ ಯೋಜನೇತರ ವೆಚ್ಚ 85 ರಿಂದ 1992ರವರೆಗೆ ಒದಗಿಸಲಾದ ಹಣವೆಷ್ಟು?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ವಿರಾಜಪೇಟೆ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖಾ ವ್ಯಾಪ್ತಿಯಲ್ಲಿರುವ ರಸ್ತೆಗಳ ಉದ್ದ ಕೆಳಕಂಡಂತಿದೆ.

1. ರಾಜ್ಯ ಹೆದ್ದಾರಿಗಳು	127.5 ಕಿ.ಮೀ.
2. ಜಿಲ್ಲಾ ಮುಖ್ಯ ರಸ್ತೆಗಳು	293. 8 ಕಿ.ಮೀ.
ಒಟ್ಟು	421.3 ಕಿ.ಮೀ.

ಆ)

	ಅನುದಾನ	ಲಕ್ಷ ರೂ.ಗಳಲ್ಲಿ ವೆಚ್ಚ
ಯೋಜನೆ :	39.84	33.50
ಯೋಜನೇತರ :	200.30	157.80
ಒಟ್ಟು	240.14	191.30

ವಿಷಯ : ಬಾಳಲೆ ಮಂಡಲಿ ಪಂಚಾಯಿತಿಗೆ ಸೇರಿದ ವಡ್ಡರಮಾಡುಕಟ್ಟೆಯಿಂದ ನೀರಾವರಿ ಸೌಲಭ್ಯ.

Q : 805

ಶ್ರೀಮತಿ ಸುಮಾವಸಂತ (ವಿರಾಜಪೇಟೆ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯ ವೀರಾಜಪೇಟೆ ತಾಲ್ಲೂಕಿನ ಬಾಳಲೆ ಮಂಡಲಿ ಪಂಚಾಯಿತಿ ವ್ಯಾಪ್ತಿಯಲ್ಲಿ ಬರತಕ್ಕ ವಡ್ಡರಮಾಡು ಕಟ್ಟೆಯಿಂದ ನೀರಾವರಿ ಸೌಲಭ್ಯವನ್ನು ಒದಗಿಸಲು ಕಾಮಗಾರಿಯನ್ನು ಪ್ರಾರಂಭಿಸಿದ್ದು ನಿಜವಲ್ಲವೆ;

ಆ) ಹಾಗಿದ್ದಲ್ಲಿ ಈ ಕಾಮಗಾರಿ ಈಗ ಯಾವ ಹಂತದಲ್ಲಿದೆ;

ಇ) ಇದರಿಂದ ಎಷ್ಟು ಎಕರೆ ನೀರಾವರಿಯಾಗುತ್ತದೆ;

ಈ) ಇದಕ್ಕಾಗಿ ಈವರೆಗೆ ವೆಚ್ಚವಾಗಿರುವ ಹಣವೆಷ್ಟು ;

ಡಾ॥ ಆರ್. ಬಿ. ಚೌಧುರಿ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಕಾಮಗಾರಿಯನ್ನು ಪ್ರಾರಂಭಿಸಿರುವುದು ನಿಜ.

ಆ) ಏರಿ ಮತ್ತು ಕೋಡಿ ಕೆಲಸಗಳು ಪೂರ್ಣಗೊಂಡಿದೆ.
ಇ) 560 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿದೆ.
ಈ) ರೂ. 12.23 ಲಕ್ಷ.

ವಿಷಯ : ಭಾಗ್ಯಜ್ಯೋತಿ ವಿದ್ಯುದ್ದೀಕರಣದಲ್ಲಿ ವಿಳಂಬ.

Q : 879

ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಿನಾಂಕ 17-8-82ರಂದು ಅಂದಿನ ಮುಖ್ಯಮಂತ್ರಿಗಳ ಸಮ್ಮುಖದಲ್ಲಿ ತೀರ್ಮಾನವಾದಂತೆ ಭಾಗ್ಯಜ್ಯೋತಿ ವಿದ್ಯುದ್ದೀಕರಣದಲ್ಲಿ ಶೀಘ್ರವಾಗಿ ಗುರಿಮುಟ್ಟಲು ಕೆಲವು ತೀರ್ಮಾನಗಳನ್ನು ಕೈಗೊಂಡಿದ್ದೂ ಸಹ ಇದುವರೆವಿಗೂ ಅನುಷ್ಠಾನಗೊಳ್ಳದಿರಲು ಕಾರಣವೇನು?
ಆ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯವರು ದಿನಾಂಕ 30-1-93ರಂದು ಕಳುಹಿಸಿರುವ ಭಾಗ್ಯಜ್ಯೋತಿ ವಿದ್ಯುದ್ದೀಕರಣ ಪರಿಷ್ಕೃತ ದರಗಳನ್ನು ನೀಡಿದ್ದು ಇನ್ನೂ ತೀರ್ಮಾನ ಕೈಗೊಳ್ಳದಿರಲು ಕಾರಣವೇನು?
ಇ) ಕೈಗೊಳ್ಳದಿದ್ದಲ್ಲಿ ಸರ್ಕಾರದ ವಾರ್ಷಿಕ ಗುರಿ ಶೇಕಡ 75ರಷ್ಟು ವಿಫಲವಾಗಿ ಬಡ ಜನತೆಗೆ ಅನ್ಯಾಯವಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?
ಈ) ಹಾಗಿದ್ದಲ್ಲಿ ಇವುಗಳ ಬಗ್ಗೆ ಸರ್ಕಾರವು ತೀರ್ಮಾನ ಕೈಗೊಳ್ಳುವುದು ಯಾವಾಗ?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :
ಅ) ಭಾಗ್ಯಜ್ಯೋತಿ ಫಲಾನುಭವಿಗಳನ್ನು ಸಂಬಂಧಪಟ್ಟ ಜಿಲ್ಲಾಪರಿಷತ್‌ನವರು ಗುರುತಿಸಿ ಆ ಪಟ್ಟಿಯನ್ನು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಅಧಿಕಾರಿಗಳು ಅಧಿಕಾರಿಗಳಿಗೆ ಕಳುಹಿಸಿದ ನಂತರ ಮಂಡಳಿಯ ಈ ಫಲಾನುಭವಿಗಳಿಗೆ ಭಾಗ್ಯಜ್ಯೋತಿ ನಿಯಮಾವಳಿಗೆ ಅನುಸಾರವಾಗಿ ವಿದ್ಯುಚ್ಛಕ್ತಿಯನ್ನು ಒದಗಿಸಲು ಸಾಧ್ಯವಿದೆಯೇ ಎಂಬುದನ್ನು ಪರಿಶೀಲಿಸಿ, ಸಾಧ್ಯವಾಗಿ ಕಂಡು ಬಂದ ಫಲಾನುಭವಿಗಳಿಗೆ ವಿದ್ಯುತ್ ಒದಗಿಸಲು ಕೂಡಲೇ ಮುಂದಿನ ಕ್ರಮ ಕೈಗೊಳ್ಳುತ್ತಿರುತ್ತಾರೆ. 1992-93ನೇ ಸಾಲಿನಲ್ಲಿ ಸಂಬಂಧಪಟ್ಟ ಜಿಲ್ಲಾ ಪರಿಷತ್‌ನವರು ಗುರುತಿಸಿ ಕಳುಹಿಸಿದ ಫಲಾನುಭವಿಗಳ ಪೈಕಿ ಭಾಗ್ಯಜ್ಯೋತಿ ನಿಯಮಾವಳಿ ಪ್ರಕಾರ ಸೂಕ್ತವಾಗಿರುವ ಮನೆಗಳಿಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಿಂದ ವಿದ್ಯುತ್ತನ್ನು ಒದಗಿಸಲಾಗುತ್ತಿದೆ.
ಆ) ಮಂಡಳಿಯು ಪರಿಷ್ಕೃತ ದರಗಳ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ. ಇದು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. ಆದಾಗ್ಯೂ ಕೂಡ ಈ ವರ್ಷದ ವಾರ್ಷಿಕ ಗುರಿಯನ್ನು ಸಾಧಿಸುವ ದೃಷ್ಟಿಯಿಂದ ಮಂಡಳಿಯು ಈ ಪರಿಷ್ಕೃತ ದರವನ್ನು 1-2-1993 ರಿಂದ ಜಾರಿಗೆ ಕೊಟ್ಟಿರುತ್ತದೆ.
ಇ) ಪ್ರಶ್ನೆ 'ಅ' ಗೆ ಕೊಟ್ಟಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.